# ಶ್ರೀಶಾರದಾದೇವಿಯವರಲ್ಲಿ ಗುರುಶಕ್ತಿಯ ಅಭಿವ್ಯಕ್ತಿ

❑ ಡಾ. ಕೆ.ಎಸ್.ರಮಾ

**ಶ್ರೀಮಾತೆ ಶಾರದಾದೇವಿಯವರಲ್ಲಿ ಶ್ರೀರಾಮಕೃಷ್ಣರಿಂದ ಜಾಗೃತಗೊಳಿಸಲ್ಪಟ್ಟ ಗುರುಭಾವ ಹೇಗೆ ವಿಶಿಷ್ಟ ಅಭಿವ್ಯಕ್ತಿಯನ್ನು ಪಡೆಯಿತು ಎಂಬುದನ್ನು ಪರಿಚಯಿಸಿರುವ ಡಾ.ಕೆ.ಎಸ್.ರಮಾ ಅವರು ಬೆಂಗಳೂರಿನ ಕಾಲೇಜೊಂದರಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿರುವರು.**

**ಗು**ರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ. ಪರಬ್ರಹ್ಮಸ್ವರೂಪಿಯಾದ ಗುರುವು ಮಾನವನ ಜೀವನದ ಅಜ್ಞಾನವನ್ನು ದೂರಮಾಡಿ, ಜ್ಞಾನವನ್ನು ನೀಡಿ, ಜೀವನದ ಸಾರ್ಥಕ್ಯವನ್ನು ಪಡೆಯಲು ನೆರವಾಗುವ ಅದ್ಭುತ ಶಕ್ತಿ. ಅದಕ್ಕಾಗಿಯೇ ಆ ಗುರುವಿಗೆ ವಂದನೆಗಳು. ದಾರಿ ಅರಿಯದೆ ತೊಳಲಾಡುವ ಜೀವಿಗೆ ಆ ಗುರುಕರುಣೆ ತಾಯಿಯ ಪ್ರೀತಿವಾತ್ಸಲ್ಯದ ರೂಪದಲ್ಲಿ ದೊರೆತಾಗ, ಶಿಷ್ಯನ ಅದೃಷ್ಟ ಎಷ್ಟಿರಬಹುದು?

ಉಪನಿಷತ್ತುಗಳಲ್ಲಿ ನಾವು ಗುರುಕುಲ ವಿದ್ಯಾಭ್ಯಾಸದ ಪದ್ಧತಿಯನ್ನು ನೋಡುತ್ತೇವೆ. ತಂದೆತಾಯಿಯರನ್ನು ಬಿಟ್ಟು ವಿದ್ಯಾಭ್ಯಾಸಕ್ಕಾಗಿ ಗುರುಕುಲ ಸೇರುವ ಎಳೆವಯಸ್ಸಿನ ಶಿಷ್ಯರಿಗೆ, ತಂದೆ ತಾಯಿ ಸಮಸ್ತವೂ ಆ ಗುರುಗಳೇ. ಅಂತೆಯೇ ಶ್ರೀಶಾರದಾ ಮಾತೆಯವರ ಸನಿಹಕ್ಕೆ ಮಂತ್ರದೀಕ್ಷೆಗಾಗಿ, ಕಷ್ಟಪರಿಹಾರಕ್ಕಾಗಿ ಬಂದ ಭಕ್ತರಿಗೆ ಶ್ರೀಮಾತೆಯವರು ಗುರುವಾಗಿ, ತಾಯಿಯಾಗಿ ಅನುಗ್ರಹಿಸಿರುವ ಅನೇಕ ಸಂದರ್ಭಗಳು ಶಾರದಾದೇವಿಯವರ ಜೀವನಚರಿತ್ರೆಯನ್ನು ಓದಿದವರಿಗೆ ಸದಾ ಸ್ಫೂರ್ತಿದಾಯಕ.

ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಧರ್ಮಪತ್ನಿ ಶಾರದಾದೇವಿಯವರಲ್ಲಿ ಜಗನ್ಮಾತೆಯನ್ನೇ ಕಂಡರು. ಜಗನ್ಮಾತೆಯ ಪೀಠದಲ್ಲಿ ಕುಳ್ಳಿರಿಸಿ ತಾವೇ ಪೂಜೆಗೈದರು. ಸ್ತ್ರೀಯನ್ನು ದೇವತೆಯಂತೆ ಆರಾಧಿಸಬೇಕೆಂದು ಮನುಸ್ಮೃತಿಯಲ್ಲಿ **ಯತ್ರನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ** ಎಂದು ಹೇಳಿದ್ದರೂ ಅದನ್ನು ಅಕ್ಷರಶಃ ಪಾಲಿಸಿ, ತಮ್ಮ ಪತ್ನಿಯನ್ನೇ ಪೀಠದಲ್ಲಿ ಕೂರಿಸಿ ದೇವಿಯೆಂದು ಪೂಜಿಸಿದ ಒಂದೇ ಒಂದು ಉದಾಹರಣೆ ಕೇವಲ ಶ್ರೀರಾಮಕೃಷ್ಣರೊಬ್ಬರಿಗೇ ಸೇರಿದ್ದು. ಆದರೆ ಅದೇ ಸಮಯದಲ್ಲಿ ಪರಮಹಂಸರ ಮಾತಿಗೆ ವಿರೋಧವಿಲ್ಲದೆ ಒಪ್ಪಿ ದೇವಿಯಂತೆ ಪೂಜೆ ಸ್ವೀಕರಿಸಿದ ಶ್ರೀಮಾತೆಯವರ ಸಾಧನೆ ಇನ್ನೂ ಹೆಚ್ಚಿನದು. ಪತಿಯೇ ಗುರು, ದೈವವೆಂದು ನಂಬಿದ, ಒಬ್ಬ ಸಾಮಾನ್ಯ ಭಾರತೀಯ ಸ್ತ್ರೀ ಅದರಲ್ಲೂ ಜಯರಾಂಬಾಟಿ ಎಂಬ ಪುಟ್ಟಹಳ್ಳಿಯಲ್ಲಿ ಹುಟ್ಟಿ ಬೆಳೆದ ಮುಗ್ಧೆ, ಓದು ಬರಹ ಬಾರದ, ಬಡತನದ, ಸಂಕೋಚದ ಅಡುಗೆ ಮನೆಯಲ್ಲೇ ಕಾಲಕಳೆದ ಸಾಮಾನ್ಯರಲ್ಲಿ ಸಾಮಾನ್ಯ ಎನ್ನುವ ಹೆಣ್ಣೊಬ್ಬಳು ಪತಿಯಿಂದ ಪೂಜಿಸಿಕೊಳ್ಳಬೇಕಾದರೆ, ಪತಿಯಿಂದ ನಮಸ್ಕಾರ ಆರತಿ ಮುಂತಾದುವುಗಳನ್ನು ಸ್ವೀಕರಿಸಬೇಕಾದರೆ ಅವರ ಮನಸ್ಸು ಭಾವನೆಗಳು ಹೇಗಿದ್ದವು? ಇಲ್ಲಿಯೇ ನಾವು ಅವರ ದೈವತ್ವವನ್ನು ಕಾಣುವುದು.



ಪೂಜೆಗೆ ಕುಳಿತಾಗಲೇ ಪತ್ನಿಯ ಭಾವನೆಗೆ ದೂರವಾದ ಸಮಾಧಿ ಸ್ಥಿತಿಗೆ ಅವರು ಮುಟ್ಟಿದ್ದರು. ಪೂಜೆ ಮುಗಿಯುವುದರಲ್ಲಿ ಪತಿಯೂ ನಿರ್ವಿಕಲ್ಪ ಭಾವ ಸಮಾಧಿಗೇರಿದ್ದರು. ಇಲ್ಲಿಯೇ ನಾವು ಶಾರದಾದೇವಿಯವರ ವೈರಾಗ್ಯದ ಶಕ್ತಿಯನ್ನು ಮುಂದೆ ಗುರುಪೀಠವನ್ನು ಅಲಂಕರಿಸುವ ಅವರ ಅಂತಃಶಕ್ತಿಯನ್ನು ಕಾಣುವುದು.

ಸುರಬಾಲೆಯಂತಹ ಹುಚ್ಚಿ ನಾದಿನಿಯನ್ನು, ಅವಳ ಅನಾಥ ಮಗಳು ರಾಧಿಯನ್ನು, ಹಣಪಿಶಾಚಿಗಳಾದ ತಮ್ಮಂದಿರು, ನೆಂಟರಿಷ್ಟರನ್ನು ಸಂಭಾಳಿಸಿ, ಅವರ ಮೂಲಕ ಸಂಸಾರದ ಬಂಧನದಲ್ಲಿದ್ದರೂ, ತಮ್ಮನ್ನು ಆಧ್ಯಾತ್ಮಿಕವಾದ ಅತ್ಯಂತ ಎತ್ತರ ಸ್ತರದಲ್ಲಿ ಇರಿಸಿಕೊಂಡವರು ಶ್ರೀಶಾರದಾದೇವಿಯವರು. ರಾಮಕೃಷ್ಣರು ಪ್ರತಿಕ್ಷಣದಲ್ಲೂ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಮೊದಲನೆಯ ಸಲ ಹುಚ್ಚಿ ಸುರಬಾಲೆಯ ಹಿಂದೆ ಅಳುತ್ತಾ, ಅಂಬೆಗಾಲಿಡುತ್ತಾ ಬರುತ್ತಿದ್ದ, ತಂದೆಯಿಲ್ಲದ ಅನಾಥಮಗು ರಾಧಿಯ ಬಗ್ಗೆ ಸ್ತ್ರೀಸಹಜವಾದ ಅನುಕಂಪದಿಂದ ಅವಳನ್ನು ಎತ್ತಿಕೊಂಡು ಕಾಪಾಡಲು ಶ್ರೀಮಾತೆಯವರು ಮುಂದಾದಾಗಲೇ ರಾಮಕೃಷ್ಣರು ಪ್ರತ್ಯಕ್ಷವಾಗಿ ಹೇಳುತ್ತಾರೆ, "ಇವಳೇ ಆ ಹುಡುಗಿ. ಇವಳನ್ನು

ಆಧರಿಸಿಕೊಂಡಿರು. ಇವಳು 'ಯೋಗಮಾಯೆ'" ಎಂದು. ಈ ಯೋಗಮಾಯೆ ಶಾರದಾದೇವಿಯವರ ಜೀವನದಲ್ಲಿ ಯಾವ ಪಾತ್ರವಹಿಸಿದಳು, ಅವಳಿಗಾಗಿ ಅವರು ಪಟ್ಟಪಾಡು ಎಷ್ಟೆಂಬುದು ಹೇಳಲಾಗದು. ನಂಟಿನಿಂದ ಅಂಟು. ಜಗತ್ತಿಗೆ ಈ ರೀತಿ ಅಂಟಿಕೊಳ್ಳದಿದ್ದರೆ ಆಗಲೇ ವೈರಾಗ್ಯದ ಹೊಸ್ತಿಲಲ್ಲಿ ನಿಂತ ಶಾರದಾದೇವಿಯವರು ಅಸಂಖ್ಯಾತ ಶಿಷ್ಯರಿಗೆ, ರಾಮಕೃಷ್ಣ ಮಠದ ಯುವ ಸಂನ್ಯಾಸಿಗಳಿಗೆ, ಗೃಹೀಭಕ್ತರಿಗೆ ತಾಯಿಯಾಗಿ, ಗುರುವಾಗಿ ಮಾರ್ಗದರ್ಶನ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ರಾಮಕೃಷ್ಣರು ತಾವು ಬದುಕಿರುವಾಗಲೇ ಶ್ರೀಮಾತೆಯವರಿಗೆ ಅವರು ಗುರುವಾಗಿ ಮಾರ್ಗದರ್ಶನ ಮಾಡಬೇಕಾಗಿರುವುದನ್ನು ತಿಳಿಸಿಕೊಡುತ್ತಿದ್ದರು. ಸತತವಾಗಿ ಅವರನ್ನು ಪರೀಕ್ಷೆಗೀಡು ಮಾಡುತ್ತಾ ಶಿಷ್ಯರ ಸುಖದುಃಖಗಳಲ್ಲಿ ಸ್ಪಂದಿಸುವ ಅವರ ಅಂತಃ ಶಕ್ತಿಯನ್ನು ಬೆಳೆಸಿ ಗುರುಪತ್ನಿಯಿಂದ ಗುರುವಾಗಿ ಬೆಳೆಯುವ ಕಾಯಕದಲ್ಲಿ ಅವರನ್ನು ತೊಡಗಿಸಿದರು. "ಸಹ ನಾ ವವತು ಸಹ ನೌ ಭುನಕ್ತು" ಇದು ಗುರುಶಿಷ್ಯರ ಮಧ್ಯದ ಮಂತ್ರವಾಗಬೇಕೆಂದು ತಿಳಿಸಿದವರು ಶ್ರೀರಾಮಕೃಷ್ಣರು. ಮನೆಗೆ ಬಂದವರಿಗೆಲ್ಲಾ ಗೃಹಿಣಿಯಾಗಿ, ಅಡುಗೆ ಮಾಡಿ ಬಡಿಸಿ, ಮಕ್ಕಳಿಗೆ ತಾಯಿಯಂತೆ ಪ್ರೀತಿಯ ಸುಧೆಯನ್ನು ನೀಡಿ, ರಾಮಕೃಷ್ಣರ ಸಾಧನೆಯು ಬರೀ ವ್ಯಕ್ತಿಗತವಾಗದೆ ಸಂಘಗತವಾಗಿ, ಹೆಮ್ಮರವಾಗಿ ಬೆಳೆಯುವಂತೆ ಮಾಡಿದವರು ಶ್ರೀಮಾತೆಯವರು.

ಈ ಮಹಾಮಾತೆ ಅತ್ಯಂತ ಪ್ರೇಮಮಯಿಯಾದರೂ ಅದೆಷ್ಟು ಮಕ್ಕಳಿಗೆ ಸಂನ್ಯಾಸವನ್ನು ಕೊಟ್ಟರು! ಸಂನ್ಯಾಸವೆಂದರೆ ತ್ಯಾಗ. ತ್ಯಾಗದಿಂದಲೇ ಪರಮಸುಖ, ಪರಮೋದ್ದೇಶ ಸಾಧನೆ. ಇದನ್ನು ಶ್ರೀಮಾತೆಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತೋರಿಸಿಕೊಟ್ಟರು. ಸಂನ್ಯಾಸಿಗಳು ಸತ್ಪಥದಲ್ಲಿ ನಡೆಯುವುದೇ ಅಲ್ಲದೆ ಮುಂದೆ ಸಾವಿರಾರು ಜನರಿಗೆ ಮಾರ್ಗದರ್ಶಕರಾಗಿ ಸಂಸಾರದ ತಾಪತ್ರಯಗಳಿಂದ ಮುಕ್ತಿ ನೀಡಬಲ್ಲರು, ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಬಲ್ಲರು. ಶ್ರೀಮಾತೆಯವರು ಸಂನ್ಯಾಸವನ್ನು ನೀಡಬೇಕಾದರೆ ಮೊದಲು ಆ ವ್ಯಕ್ತಿಗೆ ಸಾಧ್ಯವಾಗುತ್ತದೆಯೇ, ಮನೆಯಲ್ಲಿ ವೃದ್ಧ ತಂದೆತಾಯಿಗಳು, ಅಸಹಾಯಕ ಪತ್ನಿ ಮಕ್ಕಳನ್ನು ನೋಡಿಕೊಳ್ಳುವವರಿದ್ದಾರೆಯೇ; ಅವರಿಗೆ ಜೀವನಕ್ಕೆ ಸೌಕರ್ಯವಿದೆಯೇ ಮುಂತಾದುವನ್ನು ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಕೆಲವು ಭಕ್ತರು ವಿವಾಹ ಮಾಡಿಕೊಳ್ಳಲೇ ಬೇಡವೇ ಎನ್ನುವುದನ್ನು ಅವರನ್ನೇ ಕೇಳುತ್ತಿದ್ದರು. ಎಷ್ಟೋ ಜನ ಬ್ರಹ್ಮಚಾರಿಗಳಾಗಿ ಮಠದ ಸೇವೆಯಲ್ಲಿದ್ದವರು ಸಂನ್ಯಾಸ ಜೀವನ ಸಾಧ್ಯವಾಗದೆಂದು ಹೇಳಿದಾಗ, ಅವರಿಗೆ ನಿಸ್ಸಂಶಯವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಲು ತಿಳಿಸುತ್ತಿದ್ದರು. ತಮ್ಮ ಬಳಿ ಇದ್ದ ಮಠದ ಬ್ರಹ್ಮಚಾರಿಗಳಿಗೆ ಅವರು ಸಂನ್ಯಾಸವನ್ನು ನೀಡಲಿಲ್ಲ. ಏಕೆಂದರೆ ಶ್ರೀಮಾತೆಯವರಿಗೆ ನಿಕಟವಾಗಿದ್ದು, ಅಲ್ಲಿಯ ಎಲ್ಲ ಕಾರ್ಯಗಳನ್ನೂ ಅವರು ನಡೆಸಬೇಕಾಗಿತ್ತು. ಸಂನ್ಯಾಸಿಗಳಲ್ಲಿ ಅತ್ಯಂತ ಗೌರವವಿದ್ದ ಮಾತೆಯವರು ಅವರಿಂದ ಸೇವೆ ಮಾಡಿಸಿಕೊಳ್ಳಲು ಸಾಧ್ಯವೇ? ಸಂನ್ಯಾಸಿಗಳನ್ನು ಅವರು ಕೋಗಿಲೆಯ ಮರಿಗಳು ಎನ್ನುತ್ತಿದ್ದರು. ಕೋಗಿಲೆಗೆ ಪರಪುಟ್ಟ ಎನ್ನುವ ಹೆಸರಿದೆ. ಕಾಗೆಯ ಗೂಡಿನಲ್ಲಿ ಕೋಗಿಲೆಗಳು ತಮ್ಮ ಮೊಟ್ಟೆಗಳನ್ನಿಡುತ್ತವೆ. ಅವನ್ನು ಮರಿಮಾಡುವ ಕೆಲಸ ಕಾಗೆಗಳದು. ಆದರೆ ಮರಿಗಳು ಹೊರಬಂದೊಡನೆ ತಮ್ಮ ನಿಜವಾದ ತಾಯಿಯನ್ನರಸಿ ಹೊರಟು ಬಿಡುತ್ತವೆ. ಈ ಸಂಸಾರ ಬಂಧನದಿಂದ ದೂರವಾಗಿ ಆ ಮಹಾಮಾತೆಯನ್ನರಸಿ ಹೋಗುವ ಪರಿಶುದ್ಧ ಜೀವಿಗಳು ಈ ಸಂನ್ಯಾಸಿಗಳು ಎಂಬ ವಿಚಾರ ಶ್ರೀಮಾತೆಯವರಲ್ಲಿತ್ತು. ತಮ್ಮ ಬಳಿಗೆ ಬರುವ ದೀಕ್ಷಾರ್ಥಿಗಳ ಮನಸ್ಸಿನಲ್ಲಿ ಶ್ರದ್ಧೆ, ದೀಕ್ಷೆ ಪಡೆಯಬೇಕೆಂಬ ವ್ಯಾಕುಲತೆ ಇದೆಯೇ ಎನ್ನುವುದನ್ನು ತಕ್ಷಣವೇ ಗುರುತಿಸುತ್ತಿದ್ದರು. ಅಂತಹವರಿಗೆ ಮಂತ್ರದೀಕ್ಷೆ ಸಿಗುತ್ತಿತ್ತು.

ಯಾವುದೇ ಕೆಲಸಕಾರ್ಯಗಳಲ್ಲಿ ತೊಡಗಿದ್ದರೂ ಅವರ ಮನಸ್ಸು ಅನವರತವೂ ಜಪದಲ್ಲೇ ಮುಳುಗಿರುತ್ತಿತ್ತು. ಇಳಿ ವಯಸ್ಸಿನಲ್ಲಿ ಕಾಯಿಲೆಯಿಂದ ಮಲಗಿದಾಗಲೂ ಅವರು ನಿದ್ರಿಸುತ್ತಿರಲಿಲ್ಲ. ಜಪ ಮಾಡುತ್ತಾ ಮಲಗಿರುತ್ತಿದ್ದರು. ಈ ಜಪ, ತಮ್ಮಿಂದ ದೀಕ್ಷೆ ತೆಗೆದುಕೊಂಡೂ ಅನುಷ್ಠಾನ ಮಾಡದ ತಮ್ಮ ಶಿಷ್ಯರ ಒಳಿತಿಗಾಗಿ. ಅವರ ದೈವ ಶ್ರೀರಾಮಕೃಷ್ಣ ಪರಮಹಂಸರು. ಜಪ, ಧ್ಯಾನ ಎಲ್ಲ ಶ್ರೀರಾಮಕೃಷ್ಣ ಪರಮಹಂಸರೇ. ಎಲ್ಲರಿಗೂ ನೀಡಿದ ಮಂತ್ರದೀಕ್ಷೆ ಪರಮಹಂಸರ ಮಂತ್ರ. ಇದೇ ಶ್ರೀಮಾತೆಯ ಶಕ್ತಿ. ತಮ್ಮ ಈ ಅಸಂಖ್ಯಾತ ಮಕ್ಕಳಿಗಾಗಿ ರಾಮಕೃಷ್ಣರನ್ನು ಪ್ರಾರ್ಥಿಸುವುದೇ ಅವರ ವ್ರತ. ಅಧ್ಯಾತ್ಮದ ಅತ್ಯುನ್ನತ ಶಿಖರಕ್ಕೇರಿದ ಶ್ರೀಮಾತೆಯವರು ಭಕ್ತವೃಂದದ ಪಾಪಗಳಿಗೆ ತಾವು ನೋವನ್ನನುಭವಿಸುತ್ತಿದ್ದರು. ಅವರು ಯೋಗಿನ್ ಮಾಗೆ ಒಮ್ಮೆ ದುರ್ಗಾ ಪೂಜೆಯ ಸಮಯದಲ್ಲಿ, "ನೋಡು, ಕೆಲವರು ಪ್ರಣಾಮ ಮಾಡಿದರೆ ನನ್ನ ಶರೀರಕ್ಕೆ ತಂಪಿನ ಅನುಭವವಾಗುತ್ತದೆ. ಆದರೆ ಇನ್ನು ಕೆಲವರು ಬಂದು ಮುಟ್ಟಿದರೆ ಬೆಂಕಿ ಎರಚಿದಂತಾಗುತ್ತದೆ. ಹೀಗೆ ಗಂಗಾಜಲದಿಂದ ತೊಳೆದುಕೊಳ್ಳದಿದ್ದರೆ ಆ ಉರಿ ಶಾಂತವಾಗುವುದಿಲ್ಲ!" ಎಂದು ಹೇಳಿ ಆ ದಿನ ಪದೇ ಪದೇ ಕಾಲು ತೊಳೆದುಕೊಳ್ಳುತ್ತಿದ್ದ ಕಾರಣವನ್ನು ಹೊರಗೆಡಹುತ್ತಾರೆ. ಎಲ್ಲರ ಪಾಪವನ್ನೂ ಸ್ವೀಕರಿಸಿ, ತಾನು ಕ್ಲೇಶವನ್ನನುಭವಿಸುವ ಗಂಗೆ (ತನ್ನಲ್ಲಿ ಮೀಯಲು ಬರುವ ಭಕ್ತಾದಿಗಳ ಪಾಪಗಳನ್ನು ತೊಳೆದು ಗಂಗೆ ತಾನು ಆ ಪಾಪಗಳಿಂದ ವೇದನೆಯನ್ನನುಭವಿಸಿ ಕೊನೆಗೆ ತಡೆಯಲಾರದೆ ಮಹಾವಿಷ್ಣುವಿನ ಮೊರೆಹೋಗುವಳು ಎಂದು ಪೌರಾಣಿಕ ಐತಿಹ್ಯ) ಈ ಪಾವನ ಗಂಗೆ. ಕೆಲವು ಭಕ್ತರು ಜಪ ತಪಗಳನ್ನು ಮಾಡಲು ಸೋಮಾರಿತನವನ್ನು ತೋರಿಸಿದಾಗ ಅವರಿಗೆ ದೃಢವಾಗಿ ಬುದ್ಧಿ ಹೇಳುತ್ತಿದ್ದರು. ಆದರೆ ಸಾಧನೆ ಮಾಡಲು ಕಾರಣಾಂತರದಿಂದ ಸಾಧ್ಯವಾಗದ ಶಿಷ್ಯರ ಪರವಾಗಿ ತಾವೇ ಜಪ ಮಾಡುತ್ತಿದ್ದರು. ಕೆಲವು ಶಿಷ್ಯರಿಗೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ಶ್ರೀಮಾತೆಯವರಿಗೆ ಉಂಟಾದರೆ ಅಂತಹವರಿಗೆ ನಿರಂತರ ಜಪ ಮಾಡಲು ಹೇಳುತ್ತಿದ್ದರು. ಆದರೆ ಸಾಧ್ಯವಾಗದ ಸಾಮಾನ್ಯರಿಗೆ ಎಷ್ಟು ಸಾಧ್ಯವೋ ಅಷ್ಟನ್ನು ನಿರ್ದಿಷ್ಟ ಸಮಯದಲ್ಲಿ ಮಾಡುವಂತೆ ಬೋಧಿಸುತ್ತಿದ್ದರು.

ಶ್ರೀಮಾತೆಯವರ ಅಭಿಪ್ರಾಯದಲ್ಲಿ ಯೋಗಾಸನ, ಪ್ರಾಣಾಯಾಮಗಳು ಆಧ್ಯಾತ್ಮಿಕ ಸಾಧನೆಗಳಿಗೆ ಸಂಬಂಧಪಟ್ಟ ಪ್ರಕ್ರಿಯೆಗಳೇ ಆದರೂ ಅವುಗಳ ಮೂಲ ಉದ್ದೇಶ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳುವುದು ಮತ್ತು ಜಪತಪಗಳಿಗೆ ಪೂರಕವಾದ ಮನಸ್ಸನ್ನು ಹೊಂದುವುದೇ ಆಗಿದೆ.

ಶ್ರೀಮಾತೆಯವರು ಜ್ಞಾನಪ್ರಸಾರಕ್ಕಾಗಿ, ಅಧ್ಯಾತ್ಮ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಅಸಂಖ್ಯಾತ ಜನರಿಗೆ ಮಂತ್ರದೀಕ್ಷೆಯನ್ನು ನೀಡಿದರು. ಆದರೆ ಗುರುವಾಗಿ ಮಂತ್ರದೀಕ್ಷೆ ನೀಡಿದರೆ ಸಾಕೇ? ಮಂತ್ರದ ಅನುಷ್ಠಾನ, ಅದರಿಂದುಂಟಾಗುವ ಆತ್ಮೋನ್ನತಿಯ ಬಗ್ಗೆ ಶಿಷ್ಯರಿಗೆ ತಿಳಿಸಿಕೊಡಬೇಡವೇ? ಆಚರಣೆ ತಪ್ಪಿದಾಗ ತನ್ನ ಆಚರಣೆಯಿಂದ ಅವರ ತಪ್ಪನ್ನು ತಿದ್ದಬೇಡವೇ? ಕರುಣಾಶಾಲಿಯಾದ ಗುರುವು ಶಿಷ್ಯನ ಶ್ರೇಯಸ್ಸಿಗೆ ನಿರಂತರ ಕಠಿಣ ಸಾಧನೆಯಲ್ಲಿ ತೊಡಗುವುದೇ ಗುರುಕಾರುಣ್ಯ. ಇದರ ಅಭಿವ್ಯಕ್ತಿ ಶ್ರೀಮಾತೆಯವರ ಜೀವನದ ಈ ಮಾತುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ತಮ್ಮ ಕೊನೆಯ ಖಾಯಿಲೆದಿನಗಳಲ್ಲಿ ಒಬ್ಬ ಭಕ್ತನೊಡನೆ ಜೀವೋದ್ಧಾರದ ಕುರಿತಾಗಿ ತಮ್ಮ ಅಂತರಂಗವನ್ನು ಈ ರೀತಿ ತಿಳಿಸುತ್ತಾರೆ: “ಮಗು, ಶ್ರೀರಾಮಕೃಷ್ಣರ ಇಚ್ಛೆಯಂತೆ ನನ್ನ ಈ ದೇಹ ಬಿದ್ದುಹೋದರೂ, ನನಗೆ ಬಿಡುಗಡೆ ಇದೆ ಅಂತ ತಿಳಿದುಕೊಂಡೆಯಾ? ನಾನು ಯಾರ್ಯಾರ ಜವಾಬ್ದಾರಿಯನ್ನು ನನ್ನ ಮೇಲೆ ಹೊತ್ತುಕೊಂಡಿದ್ದೇನೆಯೋ ಅವರೆಲ್ಲರೂ ಬಂಧನದಿಂದ ಮುಕ್ತರಾಗುವವರೆಗೆ ನನಗೆ ವಿಶ್ರಾಂತಿಯಿಲ್ಲ. ನಾನು ಸದಾ ಅವರೊಂದಿಗೆ ಇರಬೇಕಾಗಿದೆ. ನಾನು ಅವರೆಲ್ಲರ ಸಂಪೂರ್ಣ ಜವಾಬ್ದಾರಿಯನ್ನು ನನ್ನ ಮೇಲೆ ತೆಗೆದುಕೊಂಡುಬಿಟ್ಟಿದ್ದೇನೆ. ಮಂತ್ರದೀಕ್ಷೆ ಕೊಡುವುದೆಂದರೆ ಸಣ್ಣ ವಿಷಯವೇನು? ಎಂತಹ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ? ಅವರಿಗಾಗಿ ಎಷ್ಟೊಂದು ಚಿಂತೆ, ಕಳವಳ ಪಡಬೇಕಾಗುತ್ತದೆ? ಶ್ರೀರಾಮಕೃಷ್ಣರು ತಮ್ಮ ವಿವಿಧ ಭಕ್ತರನ್ನು ನಾನಾ ವಿಧಾನಗಳಲ್ಲಿ ಆಟವಾಡಿಸುತ್ತಿದ್ದಾರೆ. ಆದರೆ ಆ ನಿಟ್ಟಿನಲ್ಲಿ ಹೆಚ್ಚಿನಂಶವನ್ನು ಹೊರಬೇಕಾದವಳು ಮಾತ್ರ ನಾನು. ನಾನು ಯಾರನ್ನು ನನ್ನ ಸ್ವಂತದವರೆಂದು ಸ್ವೀಕರಿಸಿದ್ದೇನೆಯೋ ಅವರನ್ನು ಸುಮ್ಮನೆ ಪಕ್ಕಕ್ಕೆ ಸರಿಸಿಬಿಡುವಂತಿಲ್ಲ.”

ಶಾರದಾಮಾತೆಯವರು ಸ್ತ್ರೀಸಮುದಾಯಕ್ಕೆ ಪರಮ ಗುರುವಾಗಿರುವುದನ್ನು ಅವರ ಜೀವನದಲ್ಲಿ ಕಾಣಬಹುದು. ಮೂಢ ನಂಬಿಕೆಗಳ ವಾತಾವರಣ, ಸುತ್ತಲ ಹಳ್ಳಿಯ ಪರಿಸರ, ಹೆಚ್ಚುತ್ತಿರುವ ಭಕ್ತಾದಿಗಳ ಹಿಂಡು, ಯುವಸಂನ್ಯಾಸಿಗಳು, ಇವುಗಳ ಮಧ್ಯದಲ್ಲಿ ತಮ್ಮ ಸ್ವಭಾವಸಹಜವಾದ ಕರುಣೆಯಿಂದ ಎಲ್ಲರಿಗೂ ಅನ್ನಪೂರ್ಣೆಯಾಗಿ, ತಾಯಿಯಾಗಿ ತಾವೇ ಅಡುಗೆ ಮಾಡಿ, ಸ್ವತಃ ಬಡಿಸಿ, ತಿನ್ನಿಸಿ, ಈ ಎಲ್ಲ ಗುಣದೋಷಗಳನ್ನು ಅರಗಿಸಿಕೊಂಡವರು ಮಹಾತಾಯಿ ಶ್ರೀಶಾರದಾದೇವಿ. ತಾನೇ ಸ್ವಯಂ ಇಚ್ಛೆಯಿಂದ ಈ ಸಂಸಾರಬಂಧನದಲ್ಲಿ ಸಿಲುಕಿ, ಮನೆ ಮಂದಿಯನ್ನೆಲ್ಲಾ ಕಟ್ಟಿಕೊಂಡು ಪಡಬಾರದ ಕಷ್ಟಗಳನ್ನು ಸಹಿಸಿ, ಗೃಹಿಣೀಪದಕ್ಕೂ ಗೌರವ ತಂದವರು. ಪರಮಹಂಸರ ಮರಣಾನಂತರವೂ ಅವರು ಮಂಗಳಮಯಿಯ ಚಿಹ್ನೆಯಂತಿದ್ದ ಬಳೆಗಳನ್ನು ತೆಗೆಯದೆ, ಸದಾ ತಮ್ಮ ಹೃದಯದಲ್ಲಿದ್ದು ಮಾರ್ಗದರ್ಶನ ನೀಡುವ ಪರಮಹಂಸರ ಇರುವಿಕೆಯನ್ನು ಜಗತ್ತಿಗೆ ಸಾರಿದ್ದಲ್ಲದೆ, ಸ್ತ್ರೀಯರಿಗೆ ಹೊಸಮಾರ್ಗ ತೋರಿಸಿದ ಪಾವನಗಂಗೆ ಶ್ರೀಶಾರದಾಮಾತೆ.

**ಪವಿತ್ರಂ ಚರಿತಂ ಯಸ್ಯಾಃ ಪವಿತ್ರಂ ಜೀವನಂ ತಥಾ ।**
**ಪವಿತ್ರತಾ ಸ್ವರೂಪಿಣ್ಯೈ ತಸ್ಯೈಃ ಕುರ್ಮೋ ನಮೋ ನಮಃ ॥**

◆

## ಗುರುಶಕ್ತಿಯ ಮಹಿಮೆ

ಸ್ವಾಮಿ ಪ್ರೇಮಾನಂದರು ಭಕ್ತಿಯ ಆವೇಶದಲ್ಲಿ ಶ್ರೀಮಾತೆಯವರ ಗುರುಶಕ್ತಿಯ ಮಹಿಮೆಯನ್ನು ಕೊಂಡಾಡುವರು:

‘ಶ್ರೀಮಾತೆಯವರನ್ನು ಯಾರು ಅರ್ಥಮಾಡಿಕೊಂಡಿರುವರು? ಅಲ್ಲಿ ಯಾವುದೇ ವೈಭವದ ಸುಳಿವೂ ಇಲ್ಲ. ಶ್ರೀರಾಮಕೃಷ್ಣರಲ್ಲಾದರೂ ವಿದ್ಯೆಯ ಐಶ್ವರ್ಯವಿತ್ತು. ಆದರೆ ಶ್ರೀಮಾತೆಯವರಲ್ಲಿ? ಅವರಲ್ಲಿ ಈ ಐಶ್ವರ್ಯವೂ ಮರೆಯಾಗಿದೆ. ಇದೆಂಥ ಮಹಾಶಕ್ತಿ! ನಾವು ಯಾವ ವಿಷವನ್ನು ಸ್ವೀಕರಿಸಲಾರೆವೊ ಅದನ್ನು ಶ್ರೀಮಾತೆಯವರೆಡೆಗೆ ಕಳಿಸುತ್ತೇವೆ. ಶ್ರೀಮಾತೆಯವರು ಎಲ್ಲರನ್ನೂ ಸ್ವೀಕರಿಸುತ್ತಾರೆ. ಅನಂತಶಕ್ತಿ, ಅಪಾರ ಕರುಣೆ! ನಮ್ಮ ವಿಚಾರ ಬಿಡು, ಸ್ವಯಂ ಶ್ರೀರಾಮಕೃಷ್ಣರೂ ಹೀಗೆ ಮಾಡುವುದನ್ನು ನಾವು ನೋಡಿರಲಿಲ್ಲ. ಅವರು ಎಷ್ಟೊಂದು ಅಳೆದು-ಸುರಿದು ಪರೀಕ್ಷೆ ಮಾಡಿ ಜನರನ್ನು ಸ್ವೀಕರಿಸುತ್ತಿದ್ದರು! ಮತ್ತೆ ಇಲ್ಲಿ? ಇಲ್ಲಿ ಶ್ರೀಮಾತೆಯವರಲ್ಲಿ ಏನು ನೋಡುತ್ತಿರುವೆ? ಅದ್ಭುತ! ಅದ್ಭುತ! ಎಲ್ಲರಿಗೂ ಆಶ್ರಯ ನೀಡುತ್ತಾರೆ, ಯಾರು ಕೊಟ್ಟಿದ್ದನ್ನಾದರೂ ತಿನ್ನುತ್ತಾರೆ, ಮತ್ತೆ ಎಲ್ಲವನ್ನೂ ಜೀರ್ಣಿಸಿಕೊಳ್ಳುತ್ತಾರೆ. ತಾಯಿ! ತಾಯಿ! ನಿನಗೆ ಜಯವಾಗಲಿ! ಸುಖ-ದುಃಖಗಳಲ್ಲಿ ಸಂಪತ್ತು-ವಿಪತ್ತುಗಳಲ್ಲಿ, ಕ್ಷಾಮ-ಡಾಮರಗಳಲ್ಲಿ, ಯುದ್ಧ-ಕ್ರಾಂತಿಗಳಲ್ಲಿ ಎಲ್ಲ ಸಂದರ್ಭಗಳಲ್ಲಿ ಶ್ರೀಮಾತೆಯವರ ಅಪಾರಕರುಣೆಯನ್ನು ನೆನಪಿಸಿಕೊ.

◆